Read India
An Imprint of Pratham Books

# ಅಮ್ಮಾ !
# ನೀ ಬೇಗನೆ ಬಾರೆ !!



ರುಕ್ಮಿಣಿ ಬ್ಯಾನರ್ಜಿ

ಮಾಧವ ಚವ್ಹಾಣ್

Original Story (*Hindi*) Maa! Jaldi Karo
by Rukmini Banerji
© Pratham Books 2004
Second Telugu Edition: 2009

Illustrations: Sheetal Thapa
Kannada Translation: Jayashree Deshpande

ISBN: 81-8263-112-2

Registered Office:
PRATHAM BOOKS
633-634, 4th 'C' Main, 6th 'B' Cross,
OMBR Layout, Banaswadi, Bangalore 560 043
✆ 080-25429726 / 27 / 28

Regional Offices:
Mumbai ✆ 022-65162526,
New Delhi ✆ 011-65684113

Typesetting and Layout by: Trimiti Services

Printed by Pentaplus Printers Pvt. Ltd., Banglaore

Published by PRATHAM BOOKS
www.prathambooks.org

The development of this book was sponsored by
Dubai Creek Round Table, Dubai, U.A.E.

Some rights reserved. This book is CC-BY-3.0 licensed.
Full terms of use and attribution available at:
http://www.prathambooks.org/cc



# ಅಮ್ಮಾ !
# ನೀ ಬೇಗನೆ ಬಾರೆ !!

ಕಲ್ಪನೆ
**ರುಕ್ಮಿಣಿ ಬ್ಯಾನರ್ಜಿ**

ವಿವರಣೆ
**ಮಾಧವ ಚವ್ಹಾಣ್**

ಅನುವಾದ
**ಜಯಶ್ರೀ ದೇಶಪಾಂಡೆ**

ಇಂದು ಮುಂಜಾನೆ ಬಹು ಸುಂದರವಾದ ಬೆಳಗಾಗಿದೆ.

ನಾನು ನಿದ್ದೆಯಿಂದ ಏಳುವೆ.  ಕಣ್ಣುಗಳಲ್ಲಿ ನಿದ್ದೆ ಇನ್ನೂ

ಹೋಗಿಯೇ ಇಲ್ಲ.  ಹಾಗೆಯೇ ಮಲಗಿ ಬಿಡಬೇಕು

ಅನಿಸುತ್ತದೆ.  ಆದರೆ ಬೆಳಗಾಗಿ ಹೋಗಿದೆ.

ನಾನು ಏಳಬೇಕು.  ಎರಡೂ ಕಣ್ಣುಗಳನ್ನು

ಉಜ್ಜಿ ಕೊಂಡು ಸುತ್ತಲೂ ನೋಡಿದೆ.

ಅಮ್ಮ ಕಾಣಿಸುವುದೇ ಇಲ್ಲ!


ಅರೆ – ಅಮ್ಮನೇ ಕಾಣಿಸುವುದಿಲ್ಲ! ಎಲ್ಲಿರುವಳು ಅವಳು?

ನಾನು ಅವಳನ್ನು ನೋಡಬೇಕು.  ಕಿಟಕಿಯಲ್ಲಿ

ಆಗಲೇ ಸೂರ್ಯನು ಬಂದಿರುವನು.

ಎದ್ದು ಕುಳಿತು ನಾನು ಅವಳನ್ನು ಕರೆದೆ.

"ಮ್ಮಾ... ಅಮ್ಮಾ.... ಬೇಗ ಬಾ...."



ಅಮ್ಮ ಒಳಗೆಲ್ಲೋ ಇರಬೇಕು.

ನಾನು ಆ ರೀತಿ ಜೋರಾಗಿ ಕೂಗುವುದು

ಅವಳಿಗೆ ಇಷ್ಟ ಆಗುವುದಿಲ್ಲ.

''ನೀನು ಏಕೆ ಹಾಗೆ ಕೂಗುತ್ತಿರುವೆ ? ಸುಮ್ಮನಿರು...

ಕೂಗಬಾರದು'' ಅಮ್ಮ ನನಗೆ ಹೇಳಿದಳು.

''ಬಾ ಇಲ್ಲಿ, ಎದ್ದು ಬಾ. ಹಲ್ಲುಗಳನ್ನು ಉಜ್ಜಿಕೋ.

ನಿನಗಾಗಿ ನೀರು ಬಿಸಿಯಾಗಿದೆ.

ಸ್ನಾನ ಮಾಡು ಬಾ'' ಎಂದಳು.



ಓ...ಅಮ್ಮನಿಗೆ ಕೋಪ ಬರಬಾರದು !

ಹಾಗಾದರೆ ನಾನು ಬೇಗಬೇಗ ಎದ್ದು ಬಿಡಬೇಕು.

ಸ್ನಾನ ಮಾಡಬೇಕು.

ನಾನು ಎದ್ದು ಬಚ್ಚಲು ಮನೆಗೆ ಹೋದೆ.

ಗಡಿಬಿಡಿಯಿಂದ ಸ್ನಾನ ಮಾಡಿದೆ. ನಾನೀಗ ಬಟ್ಟೆಗಳನ್ನು ತೊಡಬೇಕು.

ನನ್ನ ಅಂಗಿ ಎಲ್ಲಿದೆ ? ಓ.. ಇಲ್ಲೇ ಇದೆ.

ನಾನು ಅಂಗಿ ತೊಟ್ಟು ಕೊಂಡೆ. ಅಮ್ಮನಿಗೆ ಕೋಪ ಬಂದ ಹಾಗಿದೆ.

ನಾನು ಕೂಗುವುದು ಅವಳಿಗೆ ಇಷ್ಟ ಆಗುವುದಿಲ್ಲ, ನಾನು ಗೊಣಗಿದೆ.

''ಮ್ಮಾ....ಬೇಗ...ಅಮ್ಮಾ ಕೊಂಚ ಬೇಗ ಬಾ.''



“ನೀನು ಗೊಣಗುವುದನ್ನು ನಿಲ್ಲಿಸುವೆಯಾ?” ಅಮ್ಮ ಕೇಳಿದಳು.

“ನೋಡಿಲ್ಲಿ, ನನಗೆ ಎಷ್ಟೊಂದು

ಕೆಲಸವಿದೆ.  ನಾನೀಗ ಮೊದಲು ಹಾಲು ಕಾಯಿಸಬೇಕು.

ನಿನಗೆ ಕುಡಿಯಲು ಹಾಲು ಬೇಕಲ್ಲವೆ ?

ಹೋಗು, ನಿನ್ನ ತಲೆ ಕೂದಲನ್ನು ಬಾಚಿಕೋ” ಎಂದಳು.



ಅರೆ, ನಾನು ಎಲ್ಲವನ್ನೂ ಮಾಡಿ ಮುಗಿಸಿರುವುದು

ಅಮ್ಮ ನೋಡಲಿಲ್ಲವೆ ? ನಾನು ಆಗಲೇ ಕೂದಲನ್ನು ಬಾಚಿಕೊಂಡು ಆಗಿದೆ.

''ಅಮ್ಮಾ, ನಾನು ತಯಾರಾಗಿರುವೆ ನೋಡಿಲ್ಲಿ''

ನಾನೀಗ ಕೊಂಚ ಜೋರಾಗಿ ಹೇಳಿದೆ.


ಅಮ್ಮನಿಗೆ ತುಂಬಾ ಕೆಲಸವಿದೆ. ಅವಳು ಯಾವಾಗಲೂ ಹಾಗೆಯೇ.

ಸದಾ ಏನನ್ನಾದರೂ ಮಾಡುತ್ತಿರುತ್ತಾಳೆ.

ಆದರೆ ನನ್ನ ಅಕ್ಕ ಮಾತ್ರ ಬೇಗನೆ ತಯಾರಾಗುವುದಿಲ್ಲ.

ಅವಳೇಕೆ ಹಾಗೆ ಮಾಡಬೇಕು ?

ನನ್ನ ಹಾಗೆ ಬೇಗಬೇಗ ಎಲ್ಲವನ್ನೂ ಮಾಡಿ ಕೊಳ್ಳಬಾರದೆ ?



ಅಕ್ಕನಿಗೆ ಶಾಲೆಗೆ ಹೋಗಲು ಧರಿಸುವ ಸಮವಸ್ತ್ರವನ್ನು
ಅಮ್ಮ ತೆಗೆದು ಕೊಡ ಬೇಕಾಗಿದೆ.
ಅವಳು ಯಾವಾಗಲೂ ಬಟ್ಟೆ ಧರಿಸಲು ಅಕ್ಕನಿಗೆ ಸಹಾಯ ಮಾಡುತ್ತಾಳೆ.
ಅಕ್ಕನಿಗೆ ಬೇಕಾಗಿರುವುದನ್ನು ಅಮ್ಮನೇ ಕೊಡುತ್ತಾಳೆ.
ಈಗಲೂ ಅಷ್ಟೆ, ಅಕ್ಕನನ್ನು ನನಗಿಂತ ಹೆಚ್ಚಾಗಿ ಅಮ್ಮ ಪ್ರೀತಿಸುವಳು ಎಂದು
ನನಗೆ ಅನಿಸುತ್ತದೆ.




ನನಗೆ ಅಸಮಾಧಾನ ಆಗುತ್ತದೆ.  ನನಗೆ ಮಾತ್ರ

'ಎಲ್ಲವನ್ನೂ ನೀನೇ ಮಾಡಿಕೊ' ಎಂದು ಅಮ್ಮ ಹೇಳುತ್ತಾಳೆ.

''ಅಮ್ಮಾ ನನಗೆ ತಡವಾಗುತ್ತಾ ಇದೆ'' ನಾನು ಜೋರಾಗಿ ಹೇಳಿದೆ.

ನನ್ನ ಶಾಲೆಯ ಚೀಲ ಮತ್ತು ನೀರಿನ ಬಾಟಲಿಗಳನ್ನು ಎತ್ತಿಕೊಂಡೆ.

ನನ್ನ ಚಪ್ಪಲಿಗಳನ್ನು ಹಾಕಿಕೊಂಡೆ.



ಅಮ್ಮ ಮತ್ತು ಅಕ್ಕ ಇನ್ನೂ ಹೊರಗೆ ಬಂದೇ ಇಲ್ಲ.

ಅವರಿಬ್ಬರೂ ಏನೋ ಮಾಡುತ್ತಿದ್ದಾರೆ.

''ನೀನು ಕೊಂಚ ಸಹನೆಯಿಂದ ಇರು.

ನಿನ್ನ ಅಕ್ಕ ತಯಾರಾಗುತ್ತಾ ಇದ್ದಾಳೆ.  ನೀನು ಗಡಿಬಿಡಿ

ಮಾಡ ಬೇಡ.  ನಾನು ಅವಳಿಗೆ ಜಡೆ ಹಾಕಿ ರಿಬ್ಬನ್

ಕಟ್ಟ ಬೇಕಾಗಿದೆ.  ಕೊಂಚ ತಾಳು'' ಅಮ್ಮ ಹೇಳಿದಳು.



ನನಗೆ ಕೋಪ ಬಂದಿತು.  ಇವಳು ಯಾವಾಗಲೂ ಹೀಗೆಯೇ.

ನನ್ನ ಮಾತನ್ನು ಕೇಳುವುದೇ ಇಲ್ಲ.

''ಅಮ್ಮ ನಾನು ಇನ್ನು ನಿಮಗಾಗಿ ಕಾಯುವುದಿಲ್ಲ.

ನೀನು ಯಾವಾಗಲೂ ಹೀಗೆಯೇ,

ಅಕ್ಕನಿಗೆ ಮಾತ್ರ ಸಹಾಯ ಮಾಡುತ್ತೀ'' ಅಂದೆ.

ನನಗೆ ತುಂಬಾ ಬೇಜಾರಾಗಿದೆ.  ಅಳು ಬರುವಂತೆ ಆಗಿದೆ.  ಅಬ್ಬಾ!

ಅಂತೂ,  ಕೊನೆಗೆ ಅಕ್ಕ ಶಾಲೆಗೆ ಹೊರಟಳು.

ನನ್ನನ್ನು ನೋಡಿ ನಗುತ್ತಿದ್ದಾಳೆ !  ಅವಳೇಕೆ ಹೀಗೆ ನಗಬೇಕು ?

ಅವಳು ಹೀಗೆ ನಗುವುದು ನನಗೆ ಹಿಡಿಸುವುದಿಲ್ಲ.



ಅಮ್ಮ ಇನ್ನೂ ಹೊರಗೆ ಬರುತ್ತಾ ಇಲ್ಲ. ನನಗೆ
ಅವಸರದಿಂದ ಎಲ್ಲಿಗಾದರೂ ಹೋಗ ಬೇಕಿರುವಾಗ
ಅವಳು ಯಾವಾಗಲೂ ಕೆಲಸದಲ್ಲಿ ಮುಳುಗಿರುತ್ತಾಳೆ.
ಅವಳೇಕೆ ಹೀಗೆ ಮಾಡುತ್ತಾಳೋ?
"ಕೊಂಚ ತಾಳು. ಒಂದೇ ನಿಮಿಷ. ನೋಡಿಲ್ಲಿ ನೀರು ಬರುತ್ತಾ ಇದೆ.
ಒಂದೆರಡು ಬಿಂದಿಗೆ ತುಂಬಿಸಿ ಇಟ್ಟುಬಿಟ್ಟರೆ ಆಮೇಲೆ
ನಾನು ನಿನ್ನ ಜೊತೆಗೆ ಹೊರಟು ಬಿಡುವೆ." ಅಮ್ಮ ಹೇಳಿದಳು.
ಆದರೆ ನನಗೆ ಸಮಯವಿಲ್ಲ!



ನಾನಿನ್ನು ಕಾಯಲಾರೆ.  ಅಮ್ಮ ಬರುತ್ತಲೇ ಇಲ್ಲ.

ನಾನು ಒಳಗೆ ಹೋಗಿ ಅವಳ ಕೈಗಳನ್ನು

ಹಿಡಿದು ಕೊಂಡು ಜೋರಾಗಿ ಎಳೆಯುತ್ತೇನೆ.

''ಬಾ...ಬೇಗ ಬಾ... ಇನ್ನು ಹೊರಡು'' ಅಂದೆ.

''ಇರು ಇರು, ಸ್ವಲ್ಪ ಇರು.

ಈ ಫ್ಯಾನಿನ ಗುಂಡಿಯನ್ನು ಒತ್ತಿ ಆರಿಸುವೆ ತಾಳು'' ಅಮ್ಮ ಹೇಳಿದಳು.

ನಾನು ಅವಳ ಕೈ ಹಿಡಿದು ಎಳೆಯುತ್ತಲೇ ಇರುವೆ.



ಅಬ್ಬಾ! ಅಂತೂ ಕೊನೆಗೊಮ್ಮೆ, ನಾವಿಬ್ಬರೂ ಮನೆಯಿಂದ ಹೊರಗೆ ಬಂದೆವು.

ಅಮ್ಮ ಮನೆಗೆ ಬೀಗವನ್ನು ಹಾಕಿದಳು.

ನನ್ನ ಕೈಗಳನ್ನು ಹಿಡಿದು ಕೊಂಡು ಅಮ್ಮನು

''ಯಾಕೋ ನನ್ನ ಪುಟ್ಟಾ, ನಿನಗೆ ಅಷ್ಟೊಂದು ಅವಸರ?!'' ಅಂದಳು.

ಅಮ್ಮ ನನ್ನನ್ನು 'ಪುಟ್ಟಾ' ಟಿಎಂದು ಕರೆಯುವುದು ನನಗೆ ತುಂಬಾ ಇಷ್ಟ ಆಗುತ್ತದೆ.

ನಾನು ಅವಳ ಮುದ್ದಿನ 'ಪುಟ್ಟ!'

ಸಂತೋಷದಿಂದ ಅವಳ ಕೈ ಹಿಡಿದು ಕೊಂಡು ನಡೆದೆ.

ಈಗ ಅಮ್ಮ ನನ್ನೊಂದಿಗೆ ಇದ್ದಾಳೆ. ಅದು ನನಗೆ ತುಂಬಾ ಖುಷಿ!!



ಆಗಾಗ ಮಗು ತನ್ನಷ್ಟಕ್ಕೇ ಮಾತಾಡುವುದನ್ನು ಮತ್ತು ಕಂಡದ್ದನ್ನು ವಿವರಿಸುತ್ತಾ ಹೋಗುವುದನ್ನು ನಾವು ಗಮನಿಸುತ್ತೇವೆ. ಅದೆಂತಹ ಸ್ಫುಟವಾದ ವಿವರಣೆ. ಅಮ್ಮಾ! ನೀ ಬೇಗನೆ ಬಾರೆ!! ಅಂತಹದೊಂದು ಚಿತ್ತಾಕರ್ಷಕ ಪ್ರಸ್ತುತಿ.

**ಈ ಮಾಲಿಕೆಯ ಇನ್ನೊಂದು ಪುಸ್ತಕ**

ಓ... ನನ್ನ ಬ್ಯಾಟ್ ಎಲ್ಲಿ?

ಮೈನವಿರೇಳಿಸುವ ಇನ್ನು ಅನೇಕಾನೇಕ ಭಾರತೀಯ ಭಾಷಾ ಪುಸ್ತಕಗಳ ಮಾಹಿತಿಗಾಗಿ ಸಂಪರ್ಕಿಸಿ : www.prathambooks.org

ನಮ್ಮ ಪುಸ್ತಕಗಳು ಕನ್ನಡ, ಇಂಗ್ಲೀಷ್, ಹಿಂದಿ, ತೆಲಗು, ತಮಿಳು, ಮರಾಠಿ, ಗುಜರಾತಿ, ಬೆಂಗಾಲಿ, ಪಂಜಾಬಿ, ಉರ್ದು ಮತ್ತು ಒರಿಯಾ ಭಾಷೆಗಳಲ್ಲೂ ಲಭ್ಯ ಇವೆ.

**PRATHAM BOOKS**

ಅತ್ಯುತ್ತಮ ಗುಣಮಟ್ಟದ ಪುಸ್ತಕಗಳನ್ನು ಭಾರತೀಯ ಭಾಷೆಗಳಲ್ಲಿ ಮಕ್ಕಳಿಗೆ ಎಟುಕುವ ಬೆಲೆಯಲ್ಲಿ ನೀಡುವ ಲಾಭರಹಿತ ಪ್ರಕಾಶನ ಸಂಸ್ಥೆ 'ಪ್ರಥಮ್ ಬುಕ್ಸ್'

ISBN 81-8263-112-2

Age Group: 3-6 yrs.
Amma ! Nee Begane Baare!! (Kannada)
Rs. 15.00